502(368) ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು, (ತಾಲ್ಲೂಕುವಾರು, ಹೋಬಳಿವಾರು ವಿವರ ನೀಡುವುದು)

ಆ) ಈ ಪೈಕಿ ಎಷ್ಟು ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ

ಇ) ಸ್ವಂತ ಕಟ್ಟಡವಿಲ್ಲದೇ ಇರುವ ಶಾಲೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹೌದಾದರೆ, ಸ್ವಂತ ಕಟ್ಟಡ ಒದಗಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಶಿಕ್ಷಕರು ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಶಿಕ್ಷಕರ ಮತ್ತು ಸಿಬ್ಬಂದಿ ಕೊರತೆ ನಿವಾರಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ ಒಟ್ಟು 2549 ಪ್ರಾಥಮಿಕ, 405 ಪ್ರೌಢ ಶಿಕ್ಷಣ ಹಾಗೂ 174 ಪದವಿ ಪೂರ್ವ ಕಾಲೇಜುಗಳಿರುತ್ತವೆ

(ಲಭ್ಯವಿರುವ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಆ) 2006–07ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ 34 ಸರ್ಕಾರಿ ಪ್ರೌಢಶಾಲೆಗಳಿಗೆ ಮತ್ತು 6 ಸ್ವತಂತ್ರ ಪದವಿ ಪೂರ್ವ ಕಾಲೇಜುಗಳ ಪೈಕಿ 2 ಕಾಲೇಜಿಗೆ ಮಾತ್ರ ಸ್ವಂತ ಕಟ್ಟಡ ಇರುವುದಿಲ್ಲ

ಇ) ಬಂದಿದೆ

ಇದಕ್ಕಾಗಿ ನಬಾರ್ಡ್ ಧನಸಹಾಯದಿಂದ ಆರ್ ಐ ಡಿ ಎಫ್ – 07ರಡಿ ಮತ್ತು ಸರ್ವ ಶಿಕ್ಷಾ ಅಭಿಯಾನದಡಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ,

ಆರ್ ಐ ಡಿ ಎಫ್ 10ರಡಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಮತ್ತು ಆರ್ ಐ ಡಿ ಎಫ್ 11ರಡಿ ಪದವಿ ಪೂರ್ವ ಕಾಲೇಜುಗಳಿಗೆ ಕೊರಡಿಗಳನ್ನು ಒದಗಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಅಲ್ಲದೆ ಆರ್ ಐ ಡಿ ಎಫ್ 12ರಡಿ ಸರ್ಕಾರಿ ಪ್ರೌಢ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಕೊರಡಿಗಳನ್ನು ಒದಗಿಸಲು ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ

ಈ) ಬಂದಿದೆ

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ವಿಚಾರದಲ್ಲಿ 2005–06ನೇ ಸಾಲಿನಲ್ಲಿ 344 ಖಾಲಿ ಹುದ್ದೆಗಳನ್ನು ಜನವರಿ 2007ರಲ್ಲಿ ತುಂಬಲಾಗಿದೆ 2006–07ನೇ ಸಾಲಿಗೆ 263 ಹುದ್ದೆಗಳನ್ನು ತುಂಬಲು ಅರ್ಜಿಯನ್ನು ಕರೆಯಲಾಗಿದೆ

2005–06ನೇ ಸಾಲಿನಲ್ಲಿ ಪ್ರೌಢ ಶಾಲೆಗಳಿಗೆ 85 ಅಭ್ಯರ್ಥಿಗಳನ್ನು ನೇರ ನೇಮಕ ಮಾಡಲಾಗಿದೆ

2006–07ನೇ ಸಾಲಿಗೆ 222 ಜನ ಸಹ ಶಿಕ್ಷಕರ ನೇರ ನೇಮಕಕ್ಕಾಗಿ ಅರ್ಜಿಯನ್ನು ಕರೆಯಲಾಗಿದೆ

ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ ಹಾಗೂ ಪ್ರೌಢಶಾಲಾ ಸಹ ಶಿಕ್ಷಕರಿಗೆ ಉಪನ್ಯಾಸಕರಾಗಿ ಬಡ್ತಿ ನೀಡಲು ಕ್ರಮ ಜರುಗಿಸಲಾಗುತ್ತಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 368ಕ್ಕೆ ಅನುಬಂಧ-1

ತುಮಕೂರು ಜಿಲ್ಲೆಯಲ್ಲಿರುವ ಶಾಲೆಗಳ ಸಂಖ್ಯೆ

ಕ್ರ.ಸಂ	ತಾಲ್ಲೂಕು	ಸರ್ಕಾರಿ			ಅನುದಾನ ಸಹಿತ			ಅನುದಾನ ರಹಿತ		
		ಪ್ರಾ.	ಪ್ರೌ.	ಪ ಪೂ	ಪ್ರಾ.	ಪ್ರೌ	ಪ ಪೂ	ಪ್ರಾ.	ಪ್ರೌ.	ಪ ಪೂ
1	ತುಮಕೂರು	509	21	8	17	59	22	108	49	21
2	ತುರುವೇಕರೆ	318	14	2	03	25	6	19	15	3
3	ಚಿ ನಾ ಹಳ್ಳಿ	320	14	5	07	29	4	28	12	2
4	ಗುಬ್ಬಿ	404	21	5	10	25	7	17	15	6
5	ಕುಣಿಗಲ್	423	21	6	10	25	2	17	15	4
6	ತಿಪಟೂರು	289	14	4	07	25	11	35	06	1
7	ಪಾವಗಡ	261	17	5	2	22	2	30	13	6
8	ಶಿರಾ	418	23	5	1	25	5	29	16	5
9	ಕೊರಟಗೆರೆ	261	15	3	3	12	3	16	4	2
10	ಮಧುಗಿರಿ	371	25	9	0	25	3	31	16	7
	ಒಟ್ಟು	**3574**	**185**	**52**	**60**	**272**	**65**	**330**	**161**	**57**